ಅ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಉ) ಇದೆ.

ಊ) 1997ರ ಅಂತರ್ಜಲ ಮೌಲೀಕರಣ ಸಮಿತಿಯ ಮಾರ್ಗಸೂಚಿಯನ್ವಯ ರಾಜ್ಯವನ್ನು 380 ಜಲಾನಯನಗಳನ್ನಾಗಿ ವಿಂಗಡಿಸಿ ದಿನಾಂಕ: 31.12.1999ರಲ್ಲಿದ್ದಂತೆ ಅಂತರ್ಜಲ ಮೌಲೀಕರಣವನ್ನು ಮಾಡಿದ್ದು. ಈ ಮೌಲೀಕರಣದ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ಬೂದು ಮತ್ತು ಕಪ್ಪು ಪ್ರದೇಶಗಳೆಂದು ಘೋಷಿಸಿರುವ ತಾಲ್ಲೂಕುಗಳ ಹಲವು ಭಾಗಗಳು ಅಂತರ್ಜಲ ಅಭಿವೃದ್ಧಿಗೆ ತೆರವಾಗುವ ಸಾಧ್ಯತೆ ಇದೆ.

ಆಲಮಟ್ಟಿ ಯೋಜನೆಯಲ್ಲಿ ಮುಳುಗಡೆಯಾಗಿರುವ ಕೋಲ್‌ಹಾರ ಗ್ರಾಮದ ಗೈಬಿಸಾಬ್ ದರ್ಗಾ ರಕ್ಷಣೆ

1082 (1288) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಲಮಟ್ಟಿ ಯೋಜನೆಯಡಿ ಮುಳುಗಡೆಯಾಗಿರುವ ಕೋಲ್‌ಹಾರ ಗ್ರಾಮದ ಗೈಬಿಸಾಬ್ ದರ್ಗಾವನ್ನು ರಕ್ಷಿಸಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ?

ಆ) ದರ್ಗಾವನ್ನು ರಕ್ಷಿಸುವ ಸಲುವಾಗಿ ತಡೆಒಡ್ಡು ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಎಲ್. ಉಕ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):

ಅ,ಆ) ಕೂಡಲ ಸಂಗಮವನ್ನು ರಕ್ಷಿಸಿರುವ ರೀತಿಯಲ್ಲಿ ಕೋಲ್‌ಹಾರ್ ಗ್ರಾಮದ ಗೈಬಿಸಾಬ್ ದರ್ಗಾವನ್ನು ಸಹಾ ರಕ್ಷಿಸಬೇಕೆಂದು ಪ್ರಸ್ತಾವನೆಯನ್ನು ಈ ವಕ್ಫ್ (ದರ್ಗಾ) ಸಂಸ್ಥೆಯವರು ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಸದರಿ ಮನವಿಯು ಪುನರ್‌ವಸತಿ ಆಯುಕ್ತರು, ಬಾಗಲಕೋಟೆ ಇವರಲ್ಲಿ ಪರಿಶೀಲನೆಯಲ್ಲಿದೆ.

ಶಿವಮೊಗ್ಗ ವಿಧಾನಸಭೆ ಕ್ಷೇತ್ರದ ಮಸೀದಿಗಳ ಅಭಿವೃದ್ಧಿ

1084 (1341) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ (ಶಿವಮೊಗ್ಗ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಮಸೀದಿಗಳ ಅಭಿವೃದ್ಧಿಗಾಗಿ ಅನುದಾನ ಕೋರಿ ವಕ್ಫ್ ಮಂಡಳಿಗೆ ಎಷ್ಟು ಅರ್ಜಿಗಳನ್ನು ಸಲ್ಲಿಸಲಾಗಿದೆ. ಬಿಡುಗಡೆಗೊಳಿಸಲಾದ ಅನುದಾನವೆಷ್ಟು ; (ವಿವರ ನೀಡುವುದು) ?

ಆ) ವಕ್ಫ್ ಮಂಡಳಿ ವತಿಯಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಅಲ್ಪಸಂಖ್ಯಾತ ವರ್ಗದ ಮುಸ್ಲಿಂ ಜನಾಂಗದವರಿಗೆ ಯಾವ ರೀತಿಯ ನೆರವು ನೀಡಲಾಗಿರುತ್ತದೆ ; (ಸಬ್ಸಿಡಿ, ಯಂತ್ರೋಪಕರಣ ಹಾಗೂ ವೃತ್ತಿಪರ ಕೋರ್ಸ್‌ಗಳಿಗೆ) ; (ವಿವರ ನೀಡುವುದು) ?

ಇ) ಶಿವಮೊಗ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಎಷ್ಟು ಜನ ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಮಾಶಾಸನ ಮಂಜೂರಾಗಿರುತ್ತದೆ ; (ವಿವರ ನೀಡುವುದು) ?